ಇದ್ದಿದ್ದಕ್ಕೆ ತಾನೇ ನೀವೂ ಬಂದಿದ್ದು' ಎಂದು ಇವಳೂ ಜೋರಾಗಿ ಹೇಳಿದಾಗ ಅವನು ಮರುಮಾತಾಡಲು ತಿಳಿಯದೆ ತೆಪ್ಪಗೆ ತಲೆತಗ್ಗಿಸಿ ಹೊರಟುಹೋದ. ಆ ಸಿನಿಮಾದಲ್ಲಿ ನಮ್ಮ ಮುಖಗಳನ್ನು ಕಂಡಾಗ ನಮಗೇನೋ ಸಂತೋಷ. 'ಭಕ್ತ ಕುಂಬಾರ' ಸಿನಿಮಾ ವಾರಗಟ್ಟಲೆ ನಡೆದಿತ್ತು. ಮೊದಲೇ ಒಂದು ಬಾರಿ ಅದನ್ನು ನೋಡಿದ್ದರೂ, ನಾನು ಮತ್ತು ನನ್ನ ಸ್ನೇಹಿತೆ ರಾತ್ರಿ ಸುಮಾರು ಎಂಟು ಗಂಟೆ ಹೊತ್ತಿಗೆ ಟೆಂಟ್ ಹತ್ತಿರ ಹೋದೆವು. ಸಿನಿಮಾ ಆಗಲೇ ಅರ್ಧ ಮುಗಿದುಹೋಗಿತ್ತು. ಗೇಟ್‌ಕೀಪರ್ ನಮ್ಮನ್ನು ಪರದೆಯ ಹಿಂದಿನಿಂದ ಒಳಗೆ ಬಿಟ್ಟ. ನಾವು ಗಾಂಧಿಸೀಟಿನಲ್ಲಿ ಎಲ್ಲರಿಗಿಂತ ಮುಂದೆ, ಪರದೆ ಹತ್ತಿರ ಕುಳಿತು ನೋಡಿದೆವು. ಆದರೆ ಆಕೃತಿಗಳೆಲ್ಲ ಉದ್ದುದ್ದವಾಗಿ ಕಾಣುತ್ತಿದ್ದುದರಿಂದ ನಮಗೆ ಸ್ವಲ್ಪ ನಿರಾಸೆಯಾಯಿತು. ದುಡ್ಡಿಲ್ಲದೇ ಅರ್ಧ ಸಿನಿಮಾ ನೋಡಿದ ತೃಪ್ತಿ ಮಾತ್ರ ದಕ್ಕಿತು.

ಟೆಂಟ್ ಸಿನಿಮಾ ಎಂದೊಡನೆ ನೆನಪಾಗುವುದು ನಮ್ಮ ಫಣಿ ದೊಡ್ಡಮ್ಮ. ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡಿದ್ದ ಅವರು ಆಗಿನ ಕಾಲದ ಪದ್ಧತಿಯಂತೆ ತಲೆ ಬೋಳಿಸಿದ್ದರು. ಹೊರ ಪ್ರಪಂಚದ ಆಗುಹೋಗುಗಳ ಬಗ್ಗೆ ಜಾಸ್ತಿ ತಿಳಿದಿರದ ಮುಗ್ಧೆ. ಅವರನ್ನು 'ಭಕ್ತ ಮಾರ್ಕಂಡೇಯ' ಸಿನಿಮಾ ನೋಡಲು ಕರೆದುಕೊಂಡು ಹೋದೆವು. ಮಾರ್ಕಂಡೇಯನನ್ನು ಯಮ ಎಳೆದೊಯ್ಯಲು ಬಂದ ದೃಶ್ಯ. ಪಕ್ಕದಲ್ಲಿ 'ಸುರುಬುರು' ಅಳುವ ಶಬ್ದ! ನೋಡಿದರೆ ಫಣಿ ದೊಡ್ಡಮ್ಮ, 'ಏನೇ ಆದ್ರೂ ಆ ಹುಡುಗಂಗೆ ಹಂಗೆ ಕಷ್ಟ ಬರ್ಬಾರ್ದಿತ್ತು ಕಣೇ' ಎಂದು ಅಳುತ್ತಿದ್ದಾರೆ! 'ಇದು ಸಿನಿಮಾ ದೊಡ್ಡಮ್ಮ, ನಿಜವಾಗಲೂ ಆ ಹುಡುಗಂಗೆ ಏನೂ ಆಗಿರಲ್ಲ' ಎಂದು ನಮ್ಮ ತಿಳಿವಳಿಕೆಗೆ ತಕ್ಕಂತೆ ಅವರಿಗೆ ಸಮಾಧಾನ ಹೇಳಿದರೂ, ಅವರಿಗೆ ತೃಪಿಯಾಗಲಿಲ್ಲ. ಎರಡು ಮೂರು ದಿನ ಅದನ್ನೇ ಹೇಳುತ್ತಾ ಬೇಸರ ಮಾಡಿಕೊಂಡಿದ್ದರು. ದುರಂತ ಕತೆಯುಳ್ಳ ಸಿನಿಮಾ ನೋಡುವಾಗ ಕೆಲವರು ಅಳುವುದು ಕಂಡಾಗ ನಮಗೆ ನಗು ಬಂದರೂ ತಡೆದುಕೊಳ್ಳುತ್ತಿದ್ದೆವು.

ಒಮ್ಮೆ ಹೀಗೇ ಯಾವುದೋ ಸಿನಿಮಾಕ್ಕಾಗಿ ನಾನು ಮತ್ತು ನನ್ನಣ್ಣ ಸಿನಿಮಾ ಪ್ರಾರಂಭಕ್ಕೆ ಇನ್ನೈದು ನಿಮಿಷ ಇದೆ ಎನ್ನುವಾಗ ತಂದೆಯಿಂದ ದುಡ್ಡು ಪಡೆದು, ಇಬ್ಬರೂ ಟೆಂಟ್ ಕಡೆ ಓಡಿದೆವು. ನಾವು ನಮ್ಮ ತಂಗಿಯನ್ನು ಕರೆದಿರಲಿಲ್ಲ. ಅವಳು ಹಟ ಹಿಡಿದು ನಮ್ಮ ಹಿಂದೆಯೇ ಓಡಿಬಂದಳು. ನಾವು ಅವಳ ಕಡೆ ಗಮನ ಕೊಡದೆ ಟೆಂಟ್ ಹತ್ತಿರ ಹೋಗಿ ದುಡ್ಡು ಕೊಟ್ಟರೆ, ಅವರು, 'ನೋಟು ಹರಿದಿದೆ, ಬೇರೆ ತನ್ನಿ' ಎಂದರು. ಸರಿ, ನಾವು ಮತ್ತೆ ಮನೆ ಕಡೆ ಓಡಿದೆವು. ತಂದೆಯ ಹತ್ತಿರ ಹೋಗಿ, 'ನೋಟು ಹರಿದಿದೆಯಂತೆ, ಬೇರೆ ಕೊಡಿ' ಎಂದು ಕೇಳಿದೆವು. ತಂದೆ ದುರುಗುಟ್ಟಿ ನೋಡುತ್ತಾ, 'ನಿಮಗೆ ಸಿನಿಮಾಕ್ಕೆ ದುಡ್ಡು ಬೇಕಾ? ನಿಮ್ಮ ತಂಗಿ ಬಿದ್ದು ಕೈ ಮುರಿದುಕೊಂಡಿದ್ದಾಳೆ. ನಿಮಗೆ ಸಿನಿಮಾದ ಚಿಂತೆ. ಸಿನಿಮಾನೂ ಇಲ್ಲ, ಏನೂ ಇಲ್ಲ. ತೆಪ್ಪಗಿರಿ' ಎಂದು ಬೈದುಬಿಟ್ಟರು. ಆಕೆ ನಮ್ಮ ಹಿಂದೆ ಓಡಿಬರುವಾಗ ದಾರಿಯಲ್ಲಿ ಬಿದ್ದು ಕೈ ಮೂಳೆ ಮುರಿದಿತ್ತು. ನಮಗೆ ಅದರ ಅರಿವೇ ಇರಲಿಲ್ಲ. ಸಿನಿಮಾ ನೋಡಲಾಗದುದಕ್ಕೆ ನಮ್ಮಿಬ್ಬರಿಗೂ ವಿಪರೀತ ಬೇಸರವಾಯಿತು. ತಂಗಿಯ ಕೈಗೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಹಾಕಿ ಬ್ಯಾಂಡೇಜ್ ಮಾಡಿದರು. ಯಾರೂ ಇಲ್ಲದಿದ್ದಾಗ ನಾವಿಬ್ಬರೂ ಅವಳಿಗೆ, 'ನಿಂಗೆ ನಿಧಾನವಾಗಿ ಬರಲಿಕ್ಕೆ ಆಗಲಿಲ್ವಾ? ನಿನ್ನಿಂದಾಗಿ ನಾವು ಸಿನಿಮಾ ನೋಡಲಿಕ್ಕೆ ಆಗಲಿಲ್ಲ' ಎಂದು ಬೈದೆವು! ಪಾಪ, ಅವಳು ಏನು ಹೇಳಲೂ ತೋಚದೆ ಸುಮ್ಮನಿದ್ದಳು!

ಸಿನಿಮಾದಲ್ಲಿ ವಿರಾಮ(ಇಂಟರ್‌ವಲ್) ಇದ್ದಾಗ ಹೊರಗೆ ಬಂದು ಅಲ್ಲೇ ಸಾಲಾಗಿ